**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 252/2018

ಪಿಡಬ್ಲು :6 ಸಿಡಬ್ಲು : 2

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ರಾಹುಲ ಕಾಂಬಳೆ |
| ತಂದೆಯ ಹೆಸರು | : ಶ್ರೀ. ಸುರೇಶ |
| ವಯಸ್ಸು | : 32 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ್ತವ್ಯ | : ಕುಸನಾಳ, ತಾಲೂಕುಃ ಕಾಗವಾಡ |
| ದಿನಾಂಕ | : 02-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾ-3 ಸದಾಶಿವ ಕಾಂಬಳೆ, ಚಾಸಾ-9 ಪ್ರಾಸಾ-5 ವಿನೋದ ಪಾಟನಕರ ನನಗೆ ಗೊತ್ತಿರುತ್ತಾರೆ.

2. ದಿನಾಂಕ 19-09-2018 ರಂದು ಕುಸನಾಳದ ಲಕ್ಷ್ಮಿಗುಡಿ ಹತ್ತಿರ ರಸ್ತೆಯ ಮೇಲೆ ಕರೆಸಿದ್ದರು. ಸ್ಥಳದಲ್ಲಿ ಪೋಲಿಸರು, ವಿನೋದ ಪಾಟನಕರ ಮತ್ತು ಚಾಸಾ-3 ಸದಾಶಿವ ಕಾಂಬಳೆ ಇದ್ದರು. ಪೋಲಿಸರು ಸ್ಥಳದಲ್ಲಿ ಪೋಟೊ ತೆಗೆದರು. ಪಂಚನಾಮೆ ಮಾಡುತ್ತೇವೆ ಎಂದು ಪೋಲಿಸರು ಹೇಳಿದರು. ಸಂಗಪ್ಪ ಕಾಂಬಳೆ ಅವರಿಗೆ ಹೊಡೆದ ಸ್ಥಳ ಇದೆ ಎಂದು ವಿನೋದ ಪಾಟನಕರ ಅವರು ತೋರಿಸಿದ್ದರು. ಪೋಲಿಸರು ಸ್ಥಳದಲ್ಲಿ ನನ್ನ ಸಹಿ ಮಾಡಿಕೊಂಡಿದ್ದಾರೆ. ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿ ಗುರುತಿಸಿದ್ದಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ-6 ಎಂದು ಗುರುತಿಸಿದ್ದು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-6 [ಬಿ] ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಸಿ.ಪಿ ವಕೀಲರಿಂದ**

ಆರೋಪಿ ಪರ ವಕೀಲರು ಗೈರು ಹಾಜರಾಗಿರುತ್ತಾರೆ, ಈ ಹಂತದಲ್ಲಿ ಆರೋಪಿತರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ರೂ.1000/- ಖರ್ಚನ್ನು ನೀಡುವ ಶರತ್ತಿನೊಂದಿಗೆ, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.